**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎಸ್.ವಿ. ವಕೀಲರಿಂದಃ**

ನನ್ನ ತಂದೆ ಖರೀದಿ ಮಾಡಿದ ಸರ್ವೇ ನಂ.04/01 ರ ವಿಸ್ತೀರ್ಣ 48*51 ಅಡಿಗಳಂತೆ ಎಂ ಆರ್ ಆಗಿರುತ್ತದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಓ ಎಸ್. 289/2011 ರಂತೆ ದಾವೆ ಹಾಕಿರುವ ಬಗ್ಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಓ ಎಸ್.289/2011 ರಲ್ಲಿ ವಂಶವೃಕ್ಷ ನೀಡಿ ಸಾಕ್ಷಿ ಹೇಳಿರುವ ಬಗ್ಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಇಬ್ಬರು ಮಕ್ಕಳನ್ನು ಅವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿಯು ನಾನೇ ನೋಡಿಕೊಳ್ಳುತ್ತಿರುತ್ತೇನೆ. 3 ನೇ ಪ್ರತಿವಾದಿ ಜೊತೆಗೆ ಹೆಂಡತಿ ಮತ್ತು ಮಕ್ಕಳು ನನ್ನ ಮನೆಯಲ್ಲಿ ಕಳೆದ 3 ವರ್ಷಗಳಿಂದ ವಾಸವಿರುತ್ತಾರೆ. 3 ನೇ ಪ್ರತಿವಾದಿಗೆ ಜಮೀನು ಇದ್ದು ಹಾಲಿ ವ್ಯವಸಾಯ ಮಾಡುತ್ತಿಲ್ಲ. 3 ನೇ ಪ್ರತಿವಾದಿ ಜವಾಬ್ದಾರಿಯುತ ವ್ಯಕ್ತಿ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನ್ನ ಜೊತೆ ತಕರಾರಿಗೆ ಸಹಿ ಮಾಡಿರುತ್ತಾರೆ.

2. ಹನುಮಕ್ಕರವರು ತಹಸಿಲ್ದಾರು ರವರಿಗೆ **ನಿ.ಪಿ-92** ರಂತೆ ಪ್ರಮಾಣ ಪತ್ರ ಕೊಟ್ಟಿರುವ ಬಗ್ಗೆ ಗೊತ್ತಿಲ್ಲ. ವಾದಿಗಳು ಹಾಕಿರುವ ದಾಖಲೆಗಳನ್ನು ನೋಡಿರುತ್ತೇನೆ. ಹನುಮಕ್ಕರವರು ಕೊಟ್ಟಿರುವ ವಂಶವೃಕ್ಷ ಸರಿ ಎಂದರೆ ಸರಿಯಲ್ಲ. ನಾನು, ನನ್ನ ತಂದೆ ಮತ್ತು ಇತರ ಪ್ರತಿವಾದಿಗಳು ಜೊತೆಗೆ ಇತರರು 8 ನೇ ದಾವ ಸ್ವತ್ತನ್ನು ಮಂಜೂರು ಮಾಡಲು ನೀಡಿದ ಅರ್ಜಿ ಡಿಸಿ ರವರ ಬಳಿ ವಿಲೆ ಇರುತ್ತದೆ ಎಂದರೆ ಸರಿ. ಸರ್ವೇ ನಂ.23/3 ರ ವಿಸ್ತೀರ್ಣ 3 ಎಕರೆ 18 ಗುಂಟೆ ಕೆ ಪಿ ಶ್ರೀನಿವಾಸ್ ರವರ ಭಾಗಕ್ಕೆ ವಿಭಾಗದಂತೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.4 ರ ವಿಸ್ತೀರ್ಣ 4 ಎಕರೆ ನನ್ನ ಅಣ್ಣ ರಾಜಣ್ಣನಿಗೆ ಹೋಗಿರುತ್ತದೆ ಎಂದರೆ ಸರಿ. ಅದರ ಬಗ್ಗೆ ಎಂ ಆರ್ ಆಗಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದನ್ನು ಎ.ಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇನೆ. ಸದರಿ ಎಂ ಆರ್ ನಲ್ಲಿ ನನ್ನ ಮತ್ತು ನನ್ನ ಅಣ್ಣ ರಾಜಣ್ಣರವರ ತಂದೆ ಹೆಸರು ಕೆ.ಪಿ. ಪೆದ್ದ ಬೋವಿ ಎಂದರೆ ಸರಿ . ಸರ್ವೇ ನಂ. 27/4 ಮತ್ತು 27/3 ಸಹ ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ. ನಮ್ಮ ಊರಿನಲ್ಲಿ ಪೆದ್ದ ಬೋವಿ ಬಿನ್ ಪೆದ್ದ ಬೋವಿ ಎಂಬುವವರು ತುಂಬಾ ಜನ ಇರುತ್ತಾರೆ. ನಿಪಿ 82, 83 ರಲ್ಲಿರುವ ಪೆದ್ದ ಬೋವಿ ಬಿನ್ ಪೆದ್ದ ಬೋವಿ ನನ್ನ ತಂದೆ ಎಂದರೆ ಸರಿಯಲ್ಲ.

3. 1 ನೇ ದಾವ ಸ್ವತ್ತು ನನ್ನ ತಂದೆ 2001 ರಲ್ಲಿ ಮಾರಟ ಮಾಡಿರುತ್ತಾರೆ ಎಂದರೆ ಸರಿ, ಆದರೆ ಕ್ರಯ ಪತ್ರವನ್ನು ನಾನು ಹಾಜರುಪಡಿಸಿಲ್ಲ. ನನ್ನ ತಂದೆಯು ಕೆಂಗ ಪೆದ್ದ ಬೋವಿ ರವರ ದತ್ತು ಮಗ ಅಲ್ಲ, ಆದರೆ ಸ್ವಂತ ಮಗನಾಗಿರುತ್ತಾನೆ. 1 ನೇ ದಾವ ಸ್ವತ್ತಿನ ಕ್ರಯ ಪತ್ರದಲ್ಲಿ ನನ್ನ ತಂದೆ ಕೆಂಗ ಪೆದ್ದ ಬೋವಿರವರ ದತ್ತು ಮಗ ಎಂದು ನಮೂದಾಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು 2001 ರ ಕ್ರಯ ಪತ್ರವನ್ನು ನೋಡಿರುವುದಿಲ್ಲ. ನನಗೆ 2001 ರ ಕ್ರಯ ಪತ್ರದ ಬಗ್ಗೆ ಗೊತ್ತಿದ್ದರು ಸಹ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕನ ಮಗನಾದ ಶಿವ ಕುಮಾರ್ ಮತ್ತು 5 ನೇ ಪ್ರತಿವಾದಿ ರವರು ಡಿಟಿ ರವರಿಂದ ನಮ್ಮ ಕುಟುಂಬದ ವಂಶವೃಕ್ಷ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಂಶವೃಕ್ಷಗಳನ್ನು ವಾದಿಗಳು ಎಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿ 5 ನೇ ಪ್ರತಿವಾದಿಯ ವಂಶವೃಕ್ಷ ವಜ ಮಾಡಿರುತ್ತಾರೆ ಎಂದರೆ ಸರಿ , ಸಾಕ್ಷಿ ಮುಂದುವರೆದು ಸದರಿ ಆದೇಶವನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇವೆ. ಟಿಸಿ ಶಿವ ಕುಮಾರ್ ರವರ ವಂಶವೃಕ್ಷವನ್ನು ನಿಪಿ 116 ರಂತೆ ವಜ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. 1966 ರ ಮತ ದಾರರ ಪಟ್ಟಿಯಲ್ಲಿ ನನ್ನ ತಂದೆಯ ಹೆಸರು ಪೆದ್ದ ಬೋವಿ ಬಿನ್ ಪೆದ್ದ ಬೋವಿ ಎಂದು ನಮೂದಾಗಿರುತ್ತದೆ ಎಂದರೆ ಗೊತ್ತಿಲ್ಲ. ಕೆ ಪಾಪಣ್ಣ ಎಂಬುವವರು ಚಿಕ್ಕಪ್ಪ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಪೆದ್ದ ಬೋವಿ ಉರುಫ್ ದೊಡ್ಡ ಪೆದ್ದಯ್ಯ ಉರುಫ್ ದೊಡ್ಡ ಪೆದ್ದ ಬೋವಿ, ಉರುಫ್ ಪೆದ್ದಯ್ಯ ಮತ್ತು ಕಾಂಗ್ರೆಸ್ ಪೆದ್ದ ಬೋವಿ ಉರುಫ್ ಕೆ ಪೆದ್ದ ಬೋವಿ ಎಂದು ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆಯಾದ ಪೆದ್ದಯ್ಯ ರವರು ಪೆದ್ದ ಬೋವಿ ರವರ ಮಗೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕೆಂಗ್ ಪೆದ್ದ ಬೋವಿ ರವರ ಮಗ ಎಂದು ನುಡಿಯುತ್ತಾರೆ. ಕೆಂಗ್ ಪೆದ್ದ ಬೋವಿ ರವರಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಪೆದ್ದ ಬೋವಿ ರವರು ಕೆಂಗ್ ಪೆದ್ದ ಬೋವಿ ರವರ ಆಸ್ತಿಯನ್ನು ಲಪ್ ಟಾಯಿಸುವ ಉದ್ದೇಶದಿಂದ ಸುಳ್ಳು ಹೆಸರುಗಳನ್ನು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ  ಮತ್ತು  ಜೆ.ಎಮ್.ಎಫ್.ಸಿ.
ಶಿರಾ.